**CC. No.580/2016**
**DW -1**

**ಪ್ರಮಾಣೀಕರಿಸಲಾದ ದಿನಾಂಕ: 27-06-2026 .**

**ಪಾಟೀ ಸವಾಲು : ಆರೋಪಿ ಪರ ಶ್ರೀ. MNS ವಕೀಲರಿಂದ :-**

ನಿಪಿ.5 ರಿಂದ 8 ದಾಖಲಾತಿಗಳು ಈ ಪ್ರಕರಣಕ್ಕೆ ಸಂಬಂದಿಸುವುದಿಲ್ಲ ಎಂದರೆ ಸರಿಯಲ್ಲ. ನಿಡಿ-9 ಲೀಗಲ್ ನೋಟೀಸಿಗೆ ನಾನು ಪ್ರತ್ಯುತ್ತರ ನೋಟೀಸನ್ನು ನೀಡಿರುತ್ತೇನೆ. ನಾನು ಸದರಿ ರಿಪ್ಲೈ ನೋಟೀಸನ್ನು ಹಾಜರುಪಡಿಸಿದ್ದೇನೆ. ನಿಡಿ- 9 ರಿಂದ 14 ರಾ ಪರಕಣಕ್ಕೆ ಸಂಬಂದಿಸುವುದಿಲ್ಲ ಎಂದರೆ ಸರಿಯಲ್ಲ. ನಾನು ಈ ಪ್ರಕರಣದಲ್ಲಿ ಸಾಕ್ಷಿದಾರರಾಗಿ ಡಿಡಬ್ಲ್ಯೂ 2 ಮತ್ತು 3 ರವರನ್ನು ಮಾಡಿಸಿದ್ದು ಅವರಿಗೂ ಈ ಪ್ರಕರಣಕ್ಕೂ ಯಾವುದೇ ಸಂಬಂದ ಇಲ್ಲ ಎಂದರೆ ಸರಿಯಲ್ಲ. ನಾನು ಪಿರ್ಯಾದಿಗೆ ಹಣ ಕೊಡಬೇಕಾಗುತ್ತದೆ ಎಂದು ಹೇಳಿ ಬೇರೆ ಬೇರೆ ಪ್ರಕರಣಗಳು ಈ ಪ್ರಕರಣಕ್ಕೆ ಸಂಬಂದ ಇಲ್ಲದೇ ಇದ್ದರೂ ಸಹ ಈ ಪ್ರಕರಣಕ್ಕೆ ಸಂಬಂದ ಕಟ್ಟುತಿದ್ದೇನೆ ಎಂದರೆ ಸರಿಯಲ್ಲ. ಈ ಪ್ರಕರಣದಲ್ಲಿ ನಾವು ರಾಜೀಪತ್ರವನ್ನು ಸಲ್ಲಿಸಿದ್ದೇವೆ ಎಂದರೆ ಸ ರಿ . ನಾನು ನ್ಯಾಯಾಲಯಕ್ಕೆ ಆನಂತರ 2 ವರ್ಷ ಹಾಜರಾಗದೇ ನ್ಯಾಯಾಲಯದಿಂದ ವಾರೆಂಟ್ ಅಗಿತ್ತು ಎಂದರೆ ಗೊತ್ತಿಲ್ಲ . ಆನಂತರ ನಾನು ಹಾಜರಾಗಿ ಹಣವನ್ನು ಕೊಡಬೇಕಾಗುತ್ತದೆ ಎಂದು ಹೇಳಿ ಸುಳ್ಳು ದಾಖಲಾತಿಗಳನ್ನು ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ಜಾಯಿಂಟ್ ಮೆಮೋ ಪ್ರಕಾರ ನಾನು ಹಣ ಕೊಡಲು ಬದ್ದನಾಗಿರುತ್ತೇನೆಂದರೆ ಸಾಕ್ಷಿ ಪಿರ್ಯಾದಿಯು ನನಗೆ ಕೊಡಬೇಕಾದ ದಾಖಲಾತಿಯನ್ನು ಕೊಟ್ಟರೆ ನಾನು ಈಗಲೂ ಹಣವನು ಕೊಡುತ್ತೇನೆ ಎಂದು ನುಡಿಯುತ್ತಾರೆ. ಸದರಿ ದಾಖಲಾತಿಗಳನ್ನು ನಾನು ನ್ಯಾಯಾಲಯದ ಮುಂದೆ ಸೀಕರಿಸಿರುತ್ತೇನೆ ಎಂದರೆ ಸ ರಿಯಲ್ಲ.

**ಮರು ವಿಚಾರಣೆ : ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚಿಸಿದೆ)**

**ಪ್ರಧಾನ ಸಿವಿಲ್ ನ್ಯಾಯಾಧೀಶರು, ತಿಪಟೂರು**